ಅಪ್ಪ—ಅಂದರೆ ನನ್ನ ಮಾವ—ಅವರಿಗೆ ತುಂಬ ಬೇಕಾದವರು. ''ಗಣಪತಿ ರಾಯರು ಆತಿಥ್ಯಕ್ಕೆ ಹೆಸರಾದವರು. ಅವರ ಹೆಸರನ್ನು ನೀನು ಉಳಿಸಿದ್ದಿಯಮ್ಮ'' ಎಂದು ನನ್ನ ಹೆಂಡತಿಯ ಪ್ರೀತಿಪೂರ್ವಕ ಆತಿಥ್ಯಕ್ಕೆ ತಾರೀಫು ಮಾಡಿದ್ದರು.

ನಮ್ಮ ಟ್ಯಾಕ್ಸಿ ಮರೀನ್ ಲೈನ್ಸ್‌ನ ಚಂದನವಾಡಿ ಸ್ಮಶಾನ ಹಾಯುವಾಗ ಮೊಟ್ಟಮೊದಲ ಬಾರಿ, ಕಾರಂತರು ಭಾವಪರವಶರಾಗಿ ಅವರ ಕಣ್ಣುಗಳು ಹನಿಗೂಡಿದ್ದನ್ನು ಕಂಡೆ. ಇಲ್ಲಿಯೇ ಅವರ ಮಗ ಹರ್ಷನನ್ನು ಬೂದಿ ಮಾಡಲಾಗಿತ್ತು.

ಕಾರಂತರು ಊರಿಗೆ ಹೊರಡುವಾಗ ನಮಗೆ ಸಿಕ್ಕಿದ್ದು, ಅವರನ್ನು ನಮ್ಮ ಮನೆಗೆ ಕರೆತಂದ ಟ್ಯಾಕ್ಸಿಯೇ ಎಂಬುದೊಂದು ಯೋಗಾಯೋಗ. ಹೊರಡುವ ಮೊದಲು ಅವರು ಹೇಳಿದ ಮಾತು (ಎರಡನೆಯ ಬಾರಿ), ''ನನಗೆ ಮುಂಬಯಿಯಲ್ಲಿ ವ್ಯಾಸರಾಯರಲ್ಲೆ ತಂಗುವ ಭಾಗ್ಯಕ್ಕೆ ಏನನ್ನಲಿ?'' (ಹಿಂದೆ ಅವರು ವ್ಯಾಸರಾಯ ಬಲ್ಲಾಳರಲ್ಲಿ ಉಳಿದುಕೊಂಡಿದ್ದರು).

◆ **ಮುಂಬಯಿಯಲ್ಲಿ ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳರಂತಹ ಪ್ರಮುಖ ಸಾಹಿತಿಗಳ ಬರವಣಿಗೆ ನಿಮ್ಮ ಬರವಣಿಗೆಯ ಮೇಲೆ ಪ್ರಭಾವ ಬೀರಿದಂತೆ ಇಲ್ಲ. ಹೆಚ್ಚು ಕಡಿಮೆ ಒಂದೇ ಪರಿಸರದಲ್ಲಿದ್ದರೂ ಆ ಸಂಭಾವ್ಯ ಪ್ರಭಾವದಿಂದ ನೀವು ಹೇಗೆ ಹೊರಬಂದಿರಿ? ಹಾಗೆಯೇ, ನವ್ಯದ ನದಿಯಲ್ಲಿ ಈಜಿಯೂ ಅದರಾಚೆ ನಿಮ್ಮದೇ ಶೈಲಿಯ ದಡವನ್ನು ಸೇರಿರುವಿರಿ. ನಿಮ್ಮ ಬರವಣಿಗೆಯಲ್ಲಿ ಯಾವುದೇ ಲೇಖಕರ ಪ್ರಭಾವವನ್ನು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸಿದ್ದೀರಾ? ಹೌದಾದರೆ, ಯಾರ ಪ್ರಭಾವ?**

ಚಿತ್ತಾಲರು ಹಾಗೂ ಬಲ್ಲಾಳರು ನನ್ನಂತೆಯೇ ಕರಾವಳಿ ಪ್ರದೇಶದವರು. ಆದರೆ ಅವರ ಕತೆ ಕಾದಂಬರಿಗಳಲ್ಲಿ ಮುಂಬಯಿಯ ದಟ್ಟ ಪ್ರಭಾವ ಕಣ್ಣಿಗೆ ಹೊಡೆಯುವಂತೆ ಗೋಚರವಾಗುವಷ್ಟು ಗ್ರಾಮೀಣ ಬದುಕಿನ ಚಿತ್ರಣಕ್ಕೆ ಅವರೆಲ್ಲ (ಸ್ವಲ್ಪ ಮಟ್ಟಿಗೆ ಚಿತ್ತಾಲರು ಅಪವಾದ) ಅಷ್ಟಾಗಿ ಸ್ಪಂದಿಸಿಲ್ಲ ಎನ್ನಬೇಕು. ನನ್ನ ಬಾಲ್ಯ ಹಾಗೂ ಹದಿಹರೆಯ ಕಳೆದುದು ಕಷ್ಟ ಕಾರ್ಪಣ್ಯದ ಬದುಕು ಸಾಗಿಸುವ ಬೇರೆ ಬೇರೆ ಶ್ರಮಿಕ ವರ್ಗದ ಜನಗಳೊಡನೆ. ಅವರ ಬದುಕಿಗೂ ಸೌಕರ್ಯಯುತ ವರ್ಗಕ್ಕೆ ಸೇರಿದ ನನ್ನ ಬದುಕಿಗೂ ಅಂತಹ ದೊಡ್ಡ ವ್ಯತ್ಯಾಸಗಳೇನೂ ಇರಲಿಲ್ಲ. ಚಿತ್ತಾಲ, ಬಲ್ಲಾಳರನ್ನು ಅನಂತಮೂರ್ತಿ, ಅನಕೃ, ಕಾರಂತ, ಲಂಕೇಶರಂತಹ ಸಾಹಿತಿಗಳೆಂದೇ ಪರಿಗಣಿಸಿದ ನಾನು, ಅವರ ಪ್ರಭಾವಲಯದಿಂದ ತಪ್ಪಿಸಿಕೊಂಡೆ.

ನಾನು ಕತೆಗಿತೆ ಬರೆಯುವಾಗ ನವ್ಯದ ಗಾಳಿ ಜೋರಾಗಿ ಬೀಸುತ್ತಿತ್ತು. ಹೀಗಾಗಿ ಕೆಲವೇ ಕೆಲವು ಕತೆಗಳಲ್ಲಿ ನವ್ಯದ ಪ್ರಭಾವ ಇದ್ದೀತು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅಲ್ಲಿಂದ ತುರ್ತಾಗಿ ಹೊರಬಂದೆ. ನನ್ನ ಮೊದಲಿನ ಕೆಲವು ಕತೆಗಳಿಗೆ ಅಲ್ಬೇರ್ತೋ ಮೊರಾವಿಯಾ, ಜೇಮ್ಸ್ ಜಾಯ್ಸ್, ಡಿ.ಎಚ್. ಲಾರೆನ್ಸ್ ಪ್ರೇರಕ ಶಕ್ತಿಯಾದರೂ ನನ್ನ ಗೆಳೆಯ ಈಶ್ವರಯ್ಯ ನನ್ನ ಚಳಿ ಬಿಡಿಸಿದ ಬಳಿಕ ನನ್ನದೇ ಮಾರ್ಗವನ್ನು ಕಂಡುಕೊಂಡೆ. ಆದರೆ 'ವಾತ್ಸಲ್ಯ ಪಥ' (ಬಲ್ಲಾಳ) ಹಾಗೂ 'ಶಿಕಾರಿ' (ಚಿತ್ತಾಲ) ನನ್ನ ಆಲ್ ಟೈಮ್ ಫೇವರೆಟ್ ಎನ್ನಲೇಬೇಕು.

◆ **ನಿಮ್ಮ ಅಂಕಣ ಬರಹವೊಂದರಲ್ಲಿ ಜೇಬುಗಳ್ಳನೊಡನೆ ನಡೆದ ಚಕಮಕಿಯಲ್ಲಿ ನೀವು ಕೆಳಗೆ ಬಿದ್ದು ಪಾಕೀಟನ್ನು ಕಳೆದುಕೊಂಡ ಮೇಲೆಯೂ ಅವನ ಚಾಕಚಕ್ಯತೆಗೆ ಮಾರುಹೋದ ಸೊಗಸಾದ ನಿರೂಪಣೆಯಿದೆ. ನಿಮ್ಮ ಕತೆ ಕಾದಂಬರಿಗಳಲ್ಲಿ ಇರುವ ಒಂದು ಸಾಮಾನ್ಯ ಸೂತ್ರವೆಂದರೆ ಯಾರನ್ನೂ ನೋಯಿಸದ ತಿಳಿ ವಿನೋದ ವಿಡಂಬನೆ. ನೀವು ನಗೆಗಾರರು,**